ಶ್ರೀ ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):

ಅ) ಹೌದು.

ಆ) ಹೌದು

ಇ) ಕಟ್ಟಡ ನಿರ್ಮಾಣ ಕೆಲಸ ಸುಮಾರು ಆರು (6) ತಿಂಗಳಲ್ಲಿ ಪೂರ್ಣಗೊಳ್ಳುವುದೆಂದು ನಿರೀಕ್ಷಿಸಲಾಗಿದೆ. ಈವರೆಗೆ ರೂ. 20 ಲಕ್ಷ ಖರ್ಚು ಮಾಡಲಾಗಿದೆ.

ಈ) ಕಟ್ಟಡ ಕೆಲಸ ಮುಗಿದ ಕೂಡಲೆ ಅಂದರೆ ಸುಮಾರು 6-7 ತಿಂಗಳಲ್ಲಿ ಕಛೇರಿ ಸ್ಥಳಾಂತರಿಸಲಾಗುವುದು.

ಭೂ ಸುಧಾರಣೆ ಕಾಯಿದೆಗೆ ತಿದ್ದುಪಡಿ ತರುವ ಬಗ್ಗೆ

382 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭೂ ಸುಧಾರಣೆ ಕಾಯಿದೆಗೆ ತಿದ್ದುಪಡಿ ತರಲು ಸರ್ಕಾರ ನಿರ್ಧರಿಸಿದೆಯೇ?

ಆ) ಹಾಗಿದ್ದಲ್ಲಿ ಯಾವ ಕಾರಣಗಳಿಗಾಗಿ ಆ ತಿದ್ದುಪಡಿಯನ್ನು ತರಲಾಗಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಹೌದು

ಆ) ಸಾರ್ವಜನಿಕರು, ಶಾಸಕರು ಕೋರಿಕೆ ಮತ್ತು ಹೊಸ ಕೈಗಾರಿಗಾ ನೀತಿ ಮೇರೆಗೆ ಮತ್ತು ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ವ್ಯವಸಾಯ ಮಾಡಲು ಹೆಚ್ಚುವರಿ ಜಮೀನು ನೀಡುವ ಸಲುವಾಗಿ ತಿದ್ದುಪಡಿಯನ್ನು ತರಲಾಗುತ್ತಿದೆ.

ಬೀದರ್ ಜಿಲ್ಲೆಯಲ್ಲಿ ಫಾರೆಸ್ಟ್ ಪ್ಲಾಂಟೇಶನ್ ವಿಸ್ತೀರ್ಣ

385 - ಶ್ರೀ ಗುರುಪಾದಪ್ಪ ನಾಗಒಮಾರಪಳ್ಳಿ (ಔರಾದ) : ಮಾನ್ಯ ಅರಣ್ಯ ರಾಜ್ಯ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿ ಕಳೆದ 2 ವರ್ಷಗಳಲ್ಲಿ ಎಷ್ಟು ಎಕರೆ ಭೂಮಿಯಲ್ಲಿ ಫಾರೆಸ್ಟ್ ಪ್ಲಾಂಟೇಷನ್ 'ಮಾಡಲಾಗಿದೆ (ವಿಭಾಗವಾರು ಮಾಹಿತಿ ನೀಡುವುದು)

ಆ) ಇದಕ್ಕಾಗಿ ವೆಚ್ಚ ಮಾಡಲಾದ ಹಣವೆಷ್ಟು?

ಇ) ಈ ಪೈಕಿ ಎಷ್ಟು ಯಶಸ್ವಿಯಾಗಿದೆ ಹಾಗೂ ಎಷ್ಟು ನಿಷ್ಫಿಯವಾಗಿದೆ ಇದಕ್ಕೆ ಕಾರಣಗಳೇನು?

ಶ್ರೀ ಈಟಿ. ಶಂಭುನಾಥ್ (ಅರಣ್ಯ ರಾಜ್ಯ ಮಂತ್ರಿಗಳು)

ಅ) ಒಟ್ಟು 1209.71 ಹೆಕ್ಟೇರ್ ಫಾರೆಸ್ಟ್ ಪ್ಲಾಂಟೇಶನ್ ಮಾಡಲಾಗಿದೆ. ವಿವರಗಳು ಈ ಕೆಳಕಂಡಂತೆ ಇವೆ.

1. ಸಾಮಾಜಿಕ ಅರಣ್ಯ ವಿಭಾಗ ಒಟ್ಟು 857 ಹೆ.

2. ಪ್ರಾದೇಶಿಕ ವಿಭಾಗ ಒಟ್ಟು 352.71 ಹೆ.

ಆ) ಒಟ್ಟು ರೂ 44.32 ಲಕ್ಷ ಹಣವನ್ನು ವೆಚ್ಚ ಮಾಡಲಾಗಿದೆ.

ಇ) ಶೇಕಡ 70ರಷ್ಟು ಯಶಸ್ವಿಯಾಗಿದೆ. ಶೇಕಡ 30ರಷ್ಟು ನಿಷ್ಕ್ರಿಯವಾಗಿರುವುದಕ್ಕೆ ಕಾರಣ (1) ಸಕಾಲಕ್ಕೆ ಮಳೆ ಬಾರದಿರುವುದು (2) ಸುತ್ತ ಮುತ್ತಲ ಗ್ರಾಮಸ್ಥರು ಜಾನುವಾರುಗಳನ್ನು ಮೇಯಿಸಲು ಬಿಟ್ಟು ಧಕ್ಕೆ ಮಾಡುವುದು.

ರಾಜ್ಯದ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಮತ್ತು ಸರ್ವೇಯರ್ ಹುದ್ದೆಗಳ ಸಂಖ್ಯೆ

386 - ಶ್ರೀ ಗುರುಪಾದಪ್ಪ ನಾಗ್ಮಾರ್‌ಪಲ್ಲಿ (ಜೀರಾದ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗಾರ ಹಾಗೂ ಸರ್ವೆಯರ್ ಹುದ್ದೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು)?

ಆ) ಈ ಹುದ್ದೆಗಳು ಎಷ್ಟು ವರ್ಷಗಳಿಂದ ಖಾಲಿ ಇವೆ?

ಇ) ಈ ಹುದ್ದೆಗಳನ್ನು ಬಹಳ ಕಾಲದಿಂದ ಭರ್ತಿ ಮಾಡದೇ ಇರುವುದರಿಂದ ರೈತರಿಗೆ ಹಾಗೂ ಇತರ ಜನರಿಗೆ ಬಹಳ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಸರ್ಕಾರ ಖಾಲಿ ಇರುವ ಗ್ರಾಮಲೆಕ್ಕಿಗರ ಹಾಗೂ ಸರ್ವೇಯರ್‌ಗಳ ಹುದ್ದೆಗಳನ್ನು ತುಂಬಲು ತಕ್ಷಣ ಕ್ರಮ ಕೈಗೊಳ್ಳುರುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಖಾಲಿ ಇರುವ ಗ್ರಾಮಲೆಕ್ಕಿಗರ ಮತ್ತು ಸರ್ವೆಯರ್‌ಗಳ ಹುದ್ದೆಗಳು ಈ ಕೆಳಕಂಡಂತಿದೆ:

1) ಗ್ರಾಮ ಲೆಕ್ಕಿಗರು	-	2,034
2) ಸರ್ವೇಯರ್‌ಗಳು	-	1,360

ಆ) 1) ಗ್ರಾಮಲೆಕ್ಕಿಗರು - 1984 ರಿಂದ

2) ಸರ್ವೇಯರ್‌ಗಳು - 1988 ರಿಂದ

ಇ) ಹೌದು.

ಈ) 1) ಭಾರತ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸಕ್ರಮಗೊಂಡ ಹೆಚ್ಚುವರಿ ಅರ್ಹ ದಿನಗೂಲಿ ನೌಕರರನ್ನು ವರ್ಗಾವಣೆ ಮೂಲಕ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

2) ಸರ್ವೇಯರ್‌ಗಳ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಮತ್ತು ನಿಯಮಾನುಸಾರ ಮುಂಬಡ್ತಿಗೆ ಲಭ್ಯವಾಗುವ ಹುದ್ದೆಗಳನ್ನು ಮುಂಬಡ್ತಿಯ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗಿದೆ.